ಭಾಗವಹಿಸುವುದಕ್ಕೆ ಹೋಗಿದ್ದಾರೆಯೇ ಅಥವಾ ಏನಾದರೂ ವೈಯಕ್ತಿಕವಾಗಿ ಅನಾನುಕೂಲವಿದೆ ಎಂದು ಹೇಳಿ ಹೋಗಿದ್ದಾರೆಯೇ? ಆ ಬಗ್ಗೆ ತಮಗೆ ಏನಾದರೂ ಪತ್ರವನ್ನು ಕೊಟ್ಟಿದ್ದಾರೆಯೇ?

ಶ್ರೀ ಕಾಗೋಡು ತಿಮ್ಮಪ್ಪ:- ಪತ್ರವನ್ನು ಸಂಬಂಧಪಟ್ಟ ಮಂತ್ರಿಯವರು ಮಾನ್ಯ ಅಧ್ಯಕ್ಷರಿಗೆ ಕೊಟ್ಟು ಅವರಿಂದ ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆ.

ಅಧ್ಯಕ್ಷರು:- ಸಂಬಂಧಪಟ್ಟ ಮಂತ್ರಿಯವರು ವೈಯಕ್ತಿಕ ಅನಾನುಕೂಲ ಎಂದು ಹೇಳಿ ಪತ್ರ ಕೊಟ್ಟಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ತಮಗೆ ಪತ್ರ ಬಂದಿದ್ದರೆ ಈಗ ಏಕೆ ಚೀಫ್ ವಿಪ್‌ರವರು ಮಂತ್ರಿಗಳು ಬರುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ?

ಶ್ರೀ ಜಗದೀಶ್ ಶೆಟ್ಟರ್:- ಸದನದಲ್ಲಿ ಇಷ್ಟೊಂದು ಮುಖ್ಯವಾದ ವಿಚಾರಗಳ ಮೇಲೆ ಚರ್ಚೆ ನಡೆಯುವಾಗ ಅವರು ಪತ್ರ ಕೊಟ್ಟಿದ್ದಾರೆಂದು ಹೇಳಿದರೆ ಹೇಗೆ? ಚೀಫ್ ವಿಪ್‌ರವರಿಗೆ ಪತ್ರ ಕೊಟ್ಟು ಮಾನ್ಯ ಅಧ್ಯಕ್ಷರಿಗೆ ಪತ್ರ ಕೊಡದೆ ಹೋಗಿದ್ದಾರೆ. ಯಾವ ಕಾರಣಕ್ಕಾಗಿ ಕೊಟ್ಟಿಲ್ಲ?

ಶ್ರೀ ಕಾಗೋಡು ತಿಮ್ಮಪ್ಪ:- ಕೊಟ್ಟಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಸದನದಲ್ಲಿ ಚರ್ಚೆ ನಡೆಯುವಂಥ ಸಂದರ್ಭದಲ್ಲಿ ಇಲ್ಲಿಗೆ ಅವರು ಬರದೆ ಬೇರೆ ಯಾವ ಸಭೆಯಲ್ಲಿ ಅವರು ಪಾಲ್ಗೊಳ್ಳುತ್ತಿದ್ದಾರೆ? ಅಂಥ ತುರ್ತು ಸಭೆ ಏನಿತ್ತು? ಇಲ್ಲಿ ಕ್ವೊಶ್ಚನ್ ಹವರ್ ಮುಗಿದ ಮೇಲೆ ಅವರು ಹೋಗಬಹುದಿತ್ತಲ್ಲಾ? ಇವರಿಗೆ ಸದನದ ಗಂಭೀರತೆಯೇ ಅರ್ಥವಾಗುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಅವರು ಹೇಳಿಕಳುಹಿಸಿದ್ದಾರೆ ಮತ್ತು ಅವರಿಗೆ ಮಾನ್ಯ ಅಧ್ಯಕ್ಷರಿಂದ ಅನುಮತಿ ಕೂಡ ಸಿಕ್ಕಿದೆ.

ಶ್ರೀ ಕೆ.ಹೆಚ್.ರಂಗನಾಥ್:- ಮಾನ್ಯ ಅಧ್ಯಕ್ಷರೆ, ಇವತ್ತು ಆಗಿರುವ ಚರ್ಚೆಯನ್ನು ಸಂಬಂಧಿಸಿದ ಮಂತ್ರಿಗಳಿಗೆ ತಿಳಿಸಿ, ಇನ್ನು ಈ ತರಹ ಆಗದ ಹಾಗೆ ನಾವು ನೋಡಿಕೊಳ್ಳುತ್ತೇವೆ. ತಾವೆಲ್ಲಾ ಹೇಳಿದ್ದು ನನಗೆ ಅರ್ಥವಾಗುತ್ತದೆ. ಕ್ವೊಶ್ಚನ್ ಹವರ್‌ಗೆ ನಾವು ಇಂಪಾರ್ಟೆನ್ಸ್‌ನ್ನು ಕೊಡಬೇಕಾಗುತ್ತದೆ. ನಮ್ಮ ರೂಲ್ಸ್‌ನಲ್ಲಿ ಅದಕ್ಕೆ ಬಹಳ ಮಹತ್ವ ಕೊಟ್ಟಿದ್ದೇವೆ. ಆದ್ದರಿಂದ ಅದು ತಪ್ಪಾಗುತ್ತದೆ.

ಬೆಳಗಾಂ ಜಿಲ್ಲೆಯ ಅಥಣಿ ತಾಲ್ಲೂಕಿನಲ್ಲಿರುವ ಪಶು ಚಿಕಿತ್ಸಾಲಯ, ಪಶು ಆಸ್ಪತ್ರೆಗಳಲ್ಲಿ

ಖಾಲಿಯಿರುವ ಹುದ್ದೆಗಳಿಗೆ ಸಿಬ್ಬಂದಿ ನೇಮಿಸುವುದು.

ಚುಕ್ಕೆ ಗುರುತಿನ ಪ್ರಶ್ನೆ : 36(188)

ಸದಸ್ಯರ ಹೆಸರು : ಶ್ರೀ ಭರಮಗೌಡ ಅ ಕಾಗೆ (ಕಾಗವಾಡ)

ಉತ್ತರಿಸುವ ಸಚಿವರು : ಶ್ರೀ ಎ.ಕೃಷ್ಣಪ್ಪ(ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಪ್ರಶ್ನೆ

ಅ) ಬೆಳಗಾಂವ ಜಿಲ್ಲೆಯ ಅಥಣಿ ತಾಲ್ಲೂಕಿನಲ್ಲಿ ಎಷ್ಟು ಪಶು ಚಿಕಿತ್ಸಾಲಯ ಹಾಗೂ ಪಶು ಆಸ್ಪತ್ರೆಗಳಿವೆ, ಈ ಆಸ್ಪತ್ರೆಯಲ್ಲಿ ಎಷ್ಟು ಜನ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ?

ಆ) ಖಾಲಿ ಇರುವ ಕಡೆ ಕೂಡಲೆ ಸಿಬ್ಬಂದಿಯನ್ನು ನೇಮಿಸಲು ಸರ್ಕಾರವು ಕ್ರಮಕ್ಕೆಗೊಳ್ಳಲಾಗುವುದೇ?

ಉತ್ತರ

ಅ)

ಪಶು ಚಿಕಿತ್ಸಾಲಯ	10
ಪಶು ಆಸ್ಪತ್ರೆ	1
ಒಟ್ಟು	11

ಇವುಗಳಲ್ಲದೆ ಒಂದು ಸಂಚಾರಿ ಪಶು ಚಿಕಿತ್ಸಾಲಯ ಮತ್ತು 15 ಪ್ರಾಥಮಿಕ ಪಶು ಚಿಕಿತ್ಸಾಲಯಗಳು ಇದ್ದು ಒಟ್ಟು 85 ಜನ ಸಿಬ್ಬಂದಿ ಕೆಲಸ ನಿರ್ವಹಿಸುತ್ತಿದ್ದಾರೆ.

ಆ) ಖಾಲಿ ಇರುವ ಹುದ್ದೆಗಳನ್ನು ತುಂಬುವುದು, ಮುಂದುವರೆಯುತ್ತಿರುವ ಒಂದು ಪ್ರಕ್ರಿಯೆ.

ಶ್ರೀ ಭರಮಗೌಡ ಅ ಕಾಗೆ:- ಮಾನ್ಯ ಅಧ್ಯಕ್ಷರೆ, ನನ್ನ ಎರಡನೆಯ ಪ್ರಶ್ನೆಗೆ ಖಾಲಿ ಇರುವ ಹುದ್ದೆಗಳನ್ನು ತುಂಬುವುದು ಮುಂದುವರೆಯುತ್ತಿರುವ ಒಂದು ಪ್ರಕ್ರಿಯೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇತರ ಅರ್ಥ ಏನೆಂಬುದನ್ನು ಹೇಳಬೇಕು. ನನ್ನ ಮತಕ್ಷೇತ್ರದಿಂದ 20 ಸಾವಿರ ಲೀಟರ್‌ನಷ್ಟು ಹಾಲು ಮಹಾರಾಷ್ಟ್ರಕ್ಕೆ ಹೋಗುತ್ತಿದೆ, ಅಂದರೆ ಇಷ್ಟೊಂದು ದನಗಳು, ಎಮ್ಮೆಗಳು ಇರುವುದರಿಂದ ಅವುಗಳಿಗೆ ಕಾಯಿಲೆ ಬಂದರೆ ಅದನ್ನು ನೋಡುವುದಕ್ಕೆ ಸಾಕಷ್ಟು ಡಾಕ್ಟರುಗಳು ಇಲ್ಲದೆ ಬಹಳ ತೊಂದರೆಯಾಗಿದೆ. ನನ್ನ ಊರಾದ ಉಗಾರದಲ್ಲಿ ಮೂರು ವರ್ಷಗಳ ಹಿಂದೆ ನಾಲ್ಕೈದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಆಸ್ಪತ್ರೆಯನ್ನು ಕಟ್ಟಿದ್ದರೂ ಕೂಡ ಅಲ್ಲಿಗೆ ಡಾಕ್ಟರುಗಳು ಇಲ್ಲದೆ ಅದಕ್ಕೆ ಬೀಗ ಹಾಕಲಾಗಿದೆ. ಹೀಗೆ ನನ್ನ ಕ್ಷೇತ್ರದ ಬಹಳಷ್ಟು ಹಳ್ಳಿಗಳಿಗೆ

ಪಶುವೈದ್ಯಕೀಯ ಡಾಕ್ಟರುಗಳು ಇಲ್ಲದೆ ತುಂಬಾ ತೊಂದರೆಯಾಗಿದೆ. ಈ ಬಗ್ಗೆ ಮಾನ್ಯ ಮಂತ್ರಿಗಳಿಂದ ಉತ್ತರವನ್ನು ತಮ್ಮ ಮೂಲಕ ಅಪೇಕ್ಷೆ ಪಡುತ್ತಿದ್ದೇನೆ.

ಶ್ರೀ ಎ.ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೆ, ಕಂಟಿನ್ಯೂಯಸ್ ಪ್ರೋಸಸ್ ಎಂದು ಏಕೆ ಹೇಳಿದ್ದೇನೆಂದರೆ, ಮಾನ್ಯ ಸದಸ್ಯರಿಗೆ ಗೊತ್ತಿದ್ದ ಹಾಗೆ ಡಾಕ್ಟರುಗಳನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಿ ಎಂದು ಡೆಪ್ಯುಟಿ ಕಮಿಷನರ್‌ಗಳಿಗೆ ಸರ್ಕಾರ ಆದೇಶ ಕೊಟ್ಟಿದೆ. ಫಸ್ಟ್ ರೌಂಡ್ ಇಂಟರ್‌ವ್ಯೂ ಮಾಡಿದಾಗ ಕೆಲಪರು 2-3 ಜಿಲ್ಲೆಗಳಲ್ಲಿ ಅರ್ಜಿಗಳನ್ನು ಹಾಕಿಕೊಂಡು ಸೆಲೆಕ್ಟ್ ಆದವರು ಕೆಲವು ಜಿಲ್ಲೆಗಳಿಗೆ ಬಂದು ರಿಪೋರ್ಟ್ ಮಾಡಿಕೊಂಡಿಲ್ಲ. ಈಗ ಒಟ್ಟಾರೆ 1200 ವೆಕೆನ್ಸೀಸ್‌ನ್ನು ಭರ್ತಿ ಮಾಡಿದ್ದೇವೆ. ತಮ್ಮ ಪ್ರದೇಶದಲ್ಲಿನ ಆಸ್ಪತ್ರೆಗಳ ಲೆಕ್ಕವನ್ನು ಇಟ್ಟುಕೊಂಡು 3, ಡಾಕ್ಟರ್ಸ್‌ಗಳು ಸೀನಿಯರ್ ವೆಟರ್ನರಿ ಅಸಿಸ್ಟೆಂಟ್ಸ್ 2, ವೆಟರ್ನರಿ ಅಸಿಸ್ಟೆಂಟ್ಸ್ 3, ಗ್ರೂಪ್-ಡಿ ಹೀಗೆ ಒಟ್ಟು 11 ವೇಕೆನ್ಸಿಸ್‌ನ್ನು ಅಲ್ಲಿ ಭರ್ತಿ ಮಾಡಬೇಕಾಗಿದೆ. ಈಗ ಎರಡನೇ ಸುತ್ತು ಸೆಲೆಕ್ಷನ್ ಮಾಡುವುದಕ್ಕೆ ಡಿ.ಸಿಯವರಿಗೆ ಆದೇಶ ಹೋಗಿದೆ. ಅದನ್ನು ನಾವು ತುಂಬುತ್ತೇವೆ. ಮಾನ್ಯ ಸದಸ್ಯರು ಮಾತನಾಡುತ್ತಾ ಅವರ ಭಾಗದಲ್ಲಿ ಆಸ್ಪತ್ರೆಗಳು ಇಲ್ಲದೆ ತೊಂದರೆಯಾಗಿದೆ ಎಂದು ಹೇಳಿದರು. ಅಪ್‌ಗ್ರೇಡೇಷನ್‌ನಲ್ಲಿ ಹೈಯೆಸ್ಟ್ ಉತ್ತರ ಕರ್ನಾಟಕ ಭಾಗಕ್ಕೆ ನಾವು ಕೊಡುತ್ತಿದ್ದೇವೆ. ಈ ವರ್ಷ ಕೂಡ 200 ಆಸ್ಪತ್ರೆಗಳನ್ನು ಅಪ್‌ಗ್ರೇಡೇಷನ್ ಆಗಿ ಮಾಡುವುದಕ್ಕೆ ಬಿಡುಗಡೆ ಮಾಡುತ್ತಿದ್ದೇವೆ. ಇನ್ನು 15 ದಿವಸದಲ್ಲಿ ಇದು ಆಗಬಹುದು. ಆ 200ರಲ್ಲಿ ಸಿಂಹಪಾಲು ನಿಮ್ಮ ಕಡೆಗೆ ಕೊಡುತ್ತೇವೆನ್ನುವ ಮಾತಾಗಿದೆ. ಇಂಬ್ಯಾಲೆನ್ಸ್ ಏನಿದೆ ಆ ಇಂಬ್ಯಾಲೆನ್ಸ್‌ನ್ನು ಸರಿ ಮಾಡಲಿಕ್ಕೆ ಏನೇನು ಕ್ರಮ ಕೈಗೊಳ್ಳಬೇಕೋ ಅದನ್ನು ಮಾಡುತ್ತಿದ್ದೇವೆ. ಇನ್ನು ಪಶುಗಳಿಗೆ ರೋಗಗಳು ಬರುತ್ತವೆ ಎನ್ನುವ ವಿಚಾರದಲ್ಲಿ ಹೇಳುವುದಾದರೆ, ಪ್ರತಿ ಜಿಲ್ಲೆಯಲ್ಲೂ ಈಗ ಹೊಸ ಲ್ಯಾಬ್‌ಗಳನ್ನು ಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಬಹುಶಃ ಮಾರ್ಚ್ ಅಂತ್ಯದೊಳಗೆ 27 ಜಿಲ್ಲೆಗಳಿಗೂ ಕೂಡ 27 ಲ್ಯಾಬ್‌ಗಳನ್ನು ಕೊಡುತ್ತೇವೆ. ಅದರಲ್ಲಿ ಪ್ಯೆಯಾರಿಟಿ ನಾರ್ತ್ ಕರ್ನಾಟಕ ಜಿಲ್ಲೆಗಳಿಗೆ ಕೊಡುತ್ತೇವೆ. ಮಾನ್ಯ ಸದಸ್ಯರ ಕೊರಗು ನಮಗೆ ಅರ್ಥವಾಗಿದೆ. ಹೊಸ ಮಂಜೂರಾತಿಯನ್ನು ಕೊಡುವಂಥ ಸಂದರ್ಭದಲ್ಲಿ ನಿಮಗೆ ಹೆಚ್ಚು ಸಹಕಾರವನ್ನು ಸರ್ಕಾರ ತೋರಿಸುತ್ತದೆಂದು ಹೇಳುತ್ತೇನೆ ಮತ್ತು ತುಂಬಬೇಕಾಗಿರುವಂಥ ಖಾಲಿ ಹುದ್ದೆಗಳು ನಮ್ಮ ನಾರ್ಮ್ಸ್ ಪ್ರಕಾರ ಏನಿವೆ ಅವನ್ನು ಸೆಕೆಂಡ್ ರೌಂಡ್ ಸೆಲೆಕ್ಷನ್‌ನಲ್ಲಿ ತುಂಬಲಿಕ್ಕೆ ನಾನು ಡೈರೆಕ್ಷನ್ಸ್‌ನ್ನು ಕೊಡುತ್ತೇನೆ. ಹಾಗೆಯೇ ಉಗಾರ ಗ್ರಾಮದಲ್ಲಿ ಕಟ್ಟಡ ರೆಡಿಯಾಗಿದ್ದು ಅದನ್ನು ಸರ್ಕಾರದ ಸುಪರ್ದಿಗೆ ತೆಗೆದುಕೊಂಡು ಸೇವೆ ಪ್ರಾರಂಭ ಮಾಡಲಿ ಎಂದು ಮಾನ್ಯ ಸದಸ್ಯರು ಈಗತಾನೆ ಸೂಚನೆ ಕೊಟ್ಟಿದ್ದಾರೆ. ಆ ಸೂಚನೆ ಪ್ರಕಾರ ನಾವು ಕ್ರಮ ತೆಗೆದುಕೊಂಡು ಆದಷ್ಟು ಬೇಗ ಅದನ್ನು ಪ್ರಾರಂಭ ಮಾಡಲಿಕ್ಕೆ ನಾನು ಸರ್ಕಾರದ ಕಡೆಯಿಂದ ಭರವಸೆ ಕೊಡುತ್ತೇನೆ.

ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿರುವ ಸಕ್ಕರೆ ದಾಸ್ತಾನು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 37(842)